

# ಈಶಾನ್ಯಭಾರತದ ಬಿಂದಿ ಮಣಿಪುರ

■ ಕೆ.ಆರ್. ಉಮಾದೇವಿ ಉರಾಳ

ಪರ್ವತಗಳ ಗಾಂಭೀರ್ಯವನ್ನು ಆವಾಹಿಸಿಕೊಂಡಂತೆ ಕಾಣಿಸುವ ಎತ್ತರದ ಘಾಟಿಯ ಪರಿಸರ. ಇಕ್ಕಟ್ಟಾದ ರಾಷ್ಟ್ರೀಯ ಹೆದ್ದಾರಿ. ಆ ಔನ್ನತ್ಯದಲ್ಲಿ ರಸ್ತೆ ಕಾಮಗಾರಿಗಾಗಿ ಬೀಡು ಬಿಟ್ಟಿದ್ದ ಜೆಸಿಬಿಗಳು. ಅಲ್ಲಲ್ಲಿ ನದಿಗಳು, ಸೇತುವೆಗಳು, ಜಲಪಾತಗಳು. ಕಣ್ಣು ಹಾಯಿಸಿದ ಕಡೆಯಲ್ಲೆಲ್ಲ ದಟ್ಟವಾದ ಹಸಿರು–ಹೂ ಹೊತ್ತ ಮರಗಿಡಗಳ ಕಾಡುಗಳು. ಅಸ್ಸಾಂನ ಸಿಲ್‌ಚಾರ್‌ನಿಂದ 250 ಕಿ.ಮೀ. ದೂರದ ಮಣಿಪುರದ ರಾಜಧಾನಿ ಇಂಫಾಲದೆಡೆಗೆ ಬಸ್‌ನಲ್ಲಿ ಸಾಗುತ್ತಿದ್ದಾಗಿನ ದೃಶ್ಯಗಳಿವು.

ಭೂಲೋಕದ ಪುಟ್ಟ ಸ್ವರ್ಗ, ಪೂರ್ವದ ಸ್ವಿಟ್ಜರ್‌ಲೆಂಡ್, ಇಂಡಿಯಾದ ಮಾಣಿಕ್ಯ, ಪೂರ್ವದ ಕಾಶ್ಮೀರ ಎಂದೆಲ್ಲಾ ಬಣ್ಣಿಸಲಾಗುವ ಮಣಿಪುರ ರಾಜ್ಯದಲ್ಲಿನ ಪಯಣದಲ್ಲಿ ಎಲ್ಲೆಲ್ಲೂ ನಿಸರ್ಗದ ವರ್ಣರಂಜಿತ ವೈಭವ ಎದುರಾಗುತ್ತದೆ. ಅಸ್ಸಾಂ, ಮಿಝೋರಾಂ, ನಾಗಾಲೆಂಡ್ ಹಾಗೂ ಮ್ಯಾನ್ಮಾರ್ ಗಡಿ ಹೊಂದಿರುವ ಈ ರಾಜ್ಯ ಪ್ರವೇಶಿಸುವಾಗ ಪ್ರತಿಯೊಬ್ಬರು ತಪಾಸಣೆಗೆ ಒಳಗಾಗಲೇಬೇಕು. ಜನಾಂಗೀಯ ಸಂಘರ್ಷ, ಪ್ರತ್ಯೇಕತೆಯ ಹೋರಾಟಗಳಿಂದ ಪ್ರಕ್ಷುಬ್ಧವಾಗಿರುವ ಈ ರಾಜ್ಯದಲ್ಲಿ ಕಾವಲುನಿರತ ಕಮಾಂಡೋಗಳು ವಾಹನ ತಡೆದು ತಪಾಸಣೆ ನಡೆಸುತ್ತಾರೆ.

